
# ಟೈಮ್ಸ್ ಸ್ಕ್ವೇರ್!


ಟೈಮ್ಸ್ ಸ್ಕ್ವೇರ್



ಟೈಮ್ಸ್ ಸ್ಕ್ವೇರ್ ನ ಭವ್ಯ ಕಟ್ಟಡಗಳು

**ಇದು ಜಗತ್ತಿನ ಅತ್ಯಂತ ಜನಪ್ರಿಯ ಸ್ಥಳ. ೩೯.೨೦ ದಶಲಕ್ಷ ಜನರು ಪ್ರತಿ ವರ್ಷ ಭೇಟಿ ನೀಡುವ ಜಗತ್ತಿನ ಅತ್ಯಂತ ಪ್ರತಿಷ್ಠಿತ ತಾಣ ನ್ಯೂಯಾರ್ಕ್‌ನ ಈ ಟೈಮ್ಸ್ ಸ್ಕ್ವೇರ್! ಭೋಜನಪ್ರಿಯರ ಸ್ವರ್ಗವೂ ಹೌದು!**

■ ಚಿತ್ರ ಲೇಖನ:
**ವಿ. ಪ್ರದೀಪ್ ಕುಮಾರ್**

ಒಂದು ವರ್ಷದಲ್ಲಿ ಸುಮಾರು 39.20 ದಶಲಕ್ಷ ಜನರು ಭೇಟಿ ನೀಡುವ ಜಗತ್ತಿನ ಅತ್ಯಂತ ಜನಪ್ರಿಯ ಪ್ರೇಕ್ಷಣೀಯ ಸ್ಥಳ ನ್ಯೂಯಾರ್ಕ್‌ನ ಟೈಮ್ಸ್ ಸ್ಕ್ವೇರ್. ಇದರ ಬಗ್ಗೆ ಕುತೂಹಲ, ಕಾತರ ಸಹಜ. ನನ್ನೊಳಗೆ ಅದು ಹೆಚ್ಚಾಗಿಯೇ ಇತ್ತು.

ಮ್ಯಾನ್‌ಹ್ಯಾಟನ್ ನ್ಯೂಯಾರ್ಕ್ ನಗರದ ಕೇಂದ್ರ ದ್ವೀಪ. ಇಲ್ಲಿನ ಪೆನ್ ಸ್ಟೇಶನ್ನಿನ ಹೊರಗೆ ಬಂದರೆ, ಸಿಗುವುದೇ 34ನೇ ಸ್ಟ್ರೀಟ್. ಅದಕ್ಕೆ ಹತ್ತಿರದ 42ನೇ ಸ್ಟ್ರೀಟಿನ ಸುತ್ತಮುತ್ತಲಿರುವ ಪ್ರದೇಶವೇ ಟೈಮ್ಸ್ ಸ್ಕ್ವೇರ್.


ನ್ಯೂಯಾರ್ಕ್ ಟೈಮ್ಸ್ ಅಮೆರಿಕದ ಸುಮಾರು 163 ವರ್ಷಗಳಷ್ಟು ಹಳೆಯ, ಪ್ರಖ್ಯಾತ ದಿನಪತ್ರಿಕೆ. 1904ರಲ್ಲಿ ನೂತನ ಗಗನಚುಂಬಿ ಕಟ್ಟಡವನ್ನು ನಿರ್ಮಿಸಿದ ಸಂಸ್ಥೆ, ತನ್ನ ಕೇಂದ್ರ ಕಛೇರಿಯ ಕಟ್ಟಡಕ್ಕೆ ಇಟ್ಟ ಹೆಸರು ಟೈಮ್ಸ್ ಸ್ಕ್ವೇರ್. ಈ ಕಟ್ಟಡದ ಭೂಗರ್ಭದಲ್ಲಿ ನಿರ್ಮಿತವಾದ ಮೆಟ್ರೊ ಸ್ಟೇಶನ್ನಿಗೆ ಹೆಸರಿಡಬೇಕಾದ ಸಂದರ್ಭದಲ್ಲಿ ಬೇರಾವುದೇ ಸೂಕ್ತ ಹೆಸರಿಲ್ಲದೆ, ಟೈಮ್ಸ್ ಸ್ಕ್ವೇರ್ ಎಂದು ಕರೆಯಲಾಯಿತು. ಕಾಲಕ್ರಮೇಣ ಇಡೀ ಪ್ರದೇಶವೇ ಟೈಮ್ಸ್ ಸ್ಕ್ವೇರ್ ಎಂದು ಹೆಸರುವಾಸಿಯಾಯಿತು. 1913ರಲ್ಲಿ ನ್ಯೂಯಾರ್ಕ್ ಟೈಮ್ಸ್ ಇನ್ನೊಂದು ಕಟ್ಟಡಕ್ಕೆ ಸ್ಥಳಾಂತರಿಸಿದರೂ, ಪ್ರದೇಶದ ಹೆಸರು ಟೈಮ್ಸ್ ಸ್ಕ್ವೇರ್ ಎಂದೇ ಮುಂದುವರಿದು, ದಿನದ 24 ಗಂಟೆಯೂ ಪ್ರಪಂಚದ ನಾಗರಿಕರೆಲ್ಲರನ್ನೂ ಒಂದುಗೂಡಿಸುವ ತಾಣವಾಗಿ ವಿಜೃಂಭಿಸುತ್ತಿದೆ. ಟೈಮ್ಸ್ ಸ್ಕ್ವೇರ್ ಮೆಟ್ರೊ ನಿಲ್ದಾಣವನ್ನು ವರ್ಷದಲ್ಲಿ ಉಪಯೋಗಿಸುವವರ ಸಂಖ್ಯೆ 18 ದಶಲಕ್ಷವೆಂದರೆ, ಇಲ್ಲಿನ ಜನಸಾಂದ್ರತೆಯ ಅರಿವಾಗಬಹುದು.

ಟೈಮ್ಸ್ ಸ್ಕೇರಿನ ಜನಪ್ರಿಯತೆಗೆ ನೂರಾರು ವರ್ಷಗಳ ಹಿಂದಿನಿಂದ ನಡೆದು ಬಂದ ಅನೇಕ ಸಾಂಸ್ಕೃತಿಕ ಆಚರಣೆಯ ಇತಿಹಾಸವಿದೆ. ಈಗ ಇದನ್ನು ಹೋಟೆಲ್, ರೆಸ್ಟೋರೆಂಟ್, ಶಾಪಿಂಗ್ ಮತ್ತು ಮನರಂಜನೆಯ ರಾಜಧಾನಿಯೆಂದರೂ ತಪ್ಪಿಲ್ಲ. ಇಲ್ಲಿ 294 ಭಾರತೀಯ ರೆಸ್ಟೋರೆಂಟ್‌ಗಳಿವೆ. ಹಾಗಾಗಿ, ಇದು ಭೋಜನ ಪ್ರಿಯರ ಸ್ವರ್ಗವೇ ಸರಿ!

### ಡ್ರಾಪಿಂಗ್ ದ ಬಾಲ್

ಹೊಸ ವರ್ಷವನ್ನು ಕೋಟ್ಯಾಂತರ ಕನಸುಗಳೊಂದಿಗೆ ಸ್ವಾಗತಿಸಲು, ಪ್ರತಿ ವರ್ಷದ ಡಿಸೆಂಬರ್ 31ನೇ ರಾತ್ರಿ ವಿಶ್ವದೆಲ್ಲೆಡೆ ಕಾರ್ಯಕ್ರಮಗಳು ನಡೆಯುತ್ತವೆ. ಆದರೆ, ಇಲ್ಲಿ ನಡೆಯುವ ಈ ಸಂಭ್ರಮ ವಿಶಿಷ್ಟ.

ಟೈಮ್ಸ್ ಸ್ಕೇರಿನ ಕಟ್ಟಡದ ತುತ್ತತುದಿಯ ಧ್ವಜಸ್ತಂಭದಿಂದ ಡಿಸೆಂಬರ್ 31ರ ರಾತ್ರಿ 11.59ರಿಂದ ಜಾರುತ್ತಾ ಕೆಳಗೆ ಬರುವ ಟೈಮ್ಸ್ ಬಾಲ್, ಹೊಸ ವರ್ಷವನ್ನು ಸ್ವಾಗತಿಸುವ ಸಂಕೇತದಂತೆ ಪೂರ್ವ ನಿಗದಿತ ಸ್ಥಳಕ್ಕೆ ಸರಿಯಾಗಿ ಮಧ್ಯರಾತ್ರಿಯ 12 ಗಂಟೆಗೆ, ಅಂದರೆ 60 ಸೆಕೆಂಡುಗಳಲ್ಲಿ ಅಗಾಧವಾದ ಜನಸ್ತೋಮದ ಹರ್ಷೋದ್ಗಾರದ ನಡುವೆ ಬಂದು ಸೇರುತ್ತದೆ. ಈ ಸಂಭ್ರಮದಲ್ಲಿ ಪಾಲ್ಗೊಳ್ಳುವವರ ಸಂಖ್ಯೆ ಸುಮಾರು ಒಂದು ದಶಲಕ್ಷ.


ಟೈಮ್ಸ್ ಸ್ಕ್ವೇರ್ ನಲ್ಲಿ ಯೋಗಾಭ್ಯಾಸ

### ಸೋಲ್‌ಸ್ಟಿಸ್ ಸಂಭ್ರಮ

ಲ್ಯಾಟಿನ್ ಭಾಷೆಯಲ್ಲಿ ಸೋಲ್‌ಸ್ಟಿಸ್ ಎಂದರೆ ಎತ್ತರದಲ್ಲಿ ಸ್ಥಿರವಾಗಿ ನಿಂತಿರುವ ಸೂರ್ಯ ಎಂದು ಅರ್ಥೈಸಿಕೊಳ್ಳಬಹುದು. ಬೇಸಿಗೆಯ ಸೋಲ್‌ಸ್ಟಿಸ್ ಎಂದರೆ, ತನ್ನ ಪಥದ ಉತ್ತುಂಗದಲ್ಲಿರುವ ಸೂರ್ಯ ಚಲನೆಯ ದಿಕ್ಕನ್ನು ಬದಲಿಸುವ ಮುಂಚಿನ ಸ್ಥಿತಿ ಅಥವಾ ಸ್ಥಾನ. ಜೂನ್ 21ರಂದು ಬರುವ ಬೇಸಿಗೆಯ ಸೋಲ್‌ಸ್ಟಿಸ್ ಆಚರಣೆಗೆಂದೇ, ಸಾವಿರಾರು ನಿವಾಸಿಗಳು ಮುಂಜಾನೆ ಟೈಮ್ಸ್ ಸ್ಕೇರಿನ ಆವರಣದಲ್ಲಿ ಸೇರಿ, ಯೋಗಾಭ್ಯಾಸ ಮಾಡಿ ಸಂಭ್ರಮಿಸುತ್ತಾರೆ.

ಮುಂಜಾನೆ 5.30ಕ್ಕೆ ಶುರುವಾಗುವ ಈ ಕಾರ್ಯಕ್ರಮಕ್ಕೆ ಹಲವಾರು ಸಹಶಿಕ್ಷಕರಿದ್ದು, ನಿಮ್ಮ ದೇಹದ ಭಂಗಿಯಲ್ಲಿ ಸಮತೋಲನವಿರಲಿ; ಭುಜಗಳನ್ನು ನೇರವಾಗಿರಿಸಿ ಇತ್ಯಾದಿ ಸೂಚನೆಗಳನ್ನು ಕೊಡುತ್ತಿದ್ದಂತೆ, ಥಟ್ಟನೆ ನಿಲ್ಲುವ ವಾಹನಗಳ ಶಬ್ದದ ನಡುವೆ, ಪಾದಚಾರಿಗಳು ಒಂದು ಕ್ಷಣ ನಿಂತು, ಈ ಅಪರೂಪದ ದೃಶ್ಯವನ್ನು ನೋಡುತ್ತಾ ಮುಂದೆ ಸಾಗುತ್ತಾರೆ. ನಿರಂತರ–





ಸೆಂಟ್ರಲ್ ಪಾರ್ಕ್

ವಾಗಿ, ರಾತ್ರಿ 9.15ರವರೆಗೆ ಅನೇಕ ತಂಡಗಳ ಯೋಗಾಭ್ಯಾಸ ನಡೆದ ಈ ವರ್ಷದ ಆಚರಣೆಯಲ್ಲಿ ಭಾಗವಹಿಸಿದ ನಿವಾಸಿಗಳ ಸಂಖ್ಯೆ ಸುಮಾರು 11,000. ಜಗತ್ತಿನಲ್ಲಿ ಯೋಗಾಭ್ಯಾಸದ ಜನಪ್ರಿಯತೆಗೆ ಬೇರಾವ ಸಾಕ್ಷಿ ಬೇಕೆ?

## ಟೇಸ್ಟ್ ಏಷ್ಯಾ

ಏಷ್ಯಾದ ದೇಶಗಳ ಪ್ರತಿಷ್ಠಿತ ಶೆಫ್‌ಗಳು ಟೈಮ್ಸ್ ಸ್ಕೇರಿನಲ್ಲಿ ನಡೆಯುವ ಪಾಕಶಾಸ್ತ್ರದ ಸ್ಪರ್ಧೆಯಲ್ಲಿ ಭಾಗವಹಿಸಿ, ತಮ್ಮ ವಿಶಿಷ್ಟವಾದ, ಗೋಪ್ಯವಾದ ಪಾಕಸೂತ್ರಗಳ ಭಕ್ಷ್ಯಗಳನ್ನು ತಯಾರಿಸುತ್ತಾರೆ.

ಸಾಮಾನ್ಯವಾಗಿ, ಜೂನ್ ತಿಂಗಳಲ್ಲಿ ನಡೆಯುವ ಎರಡು ದಿನಗಳ ಈ ಉತ್ಸವದಲ್ಲಿ ಸಂಗೀತ, ನೃತ್ಯದ ಕಾರ್ಯಕ್ರಮಗಳೂ ನಡೆಯುವುದರಿಂದ ಮತ್ತು ಸ್ಥಳೀಯ ಟೆಲಿವಿಷನ್ ಚಾನೆಲ್‌ನಲ್ಲಿ ಪ್ರಸಾರವೂ ಆಗುವುದರಿಂದ, ಇದೊಂದು ಜನಪ್ರಿಯ ಸಾಂಸ್ಕೃತಿಕ ಜಾತ್ರೆಯಂತೆ.

## ಬ್ರಾಡ್ ವೇ

ಸಂಗೀತ, ನಾಟಕ ಪ್ರದರ್ಶನಕ್ಕಾಗಿಯೇ ಮೀಸಲಾಗಿರುವ ಸುಮಾರು 30 ಥಿಯೇಟರ್‌ಗಳಿರುವ ಬ್ರಾಡ್ ವೇ ಇರುವುದೇ ಟೈಮ್ಸ್ ಸ್ಕೇರ್‌ನಲ್ಲಿ. ಲಂಡನ್‌ನ ವೆಸ್ಟ್‌ಎಂಡ್ ಹಾಗೂ ನ್ಯೂಯಾರ್ಕ್‌ನ ಬ್ರಾಡ್ ವೇ ಥಿಯೇಟರ್‌ಗಳು, ಇಂಗ್ಲಿಷ್ ಸಾಂಸ್ಕೃತಿಕ ವಲಯದಲ್ಲಿ ಆದರ್ಶಪ್ರಾಯ ಮತ್ತು ಕಲಾವಿದರಿಗೆ ಇಲ್ಲಿ ಕೌಶಲ ಪ್ರದರ್ಶಿಸುವುದು ಒಂದು ಹೆಮ್ಮೆಯ ಅನುಭವ.

ಮ್ಯಾನ್‌ಹ್ಯಾಟನ್ನಿನ ಕೇಂದ್ರಭಾಗದಲ್ಲಿರುವ ಟೈಮ್ಸ್‌ಸ್ಕೇರ್‌ನಿಂದ ಅನೇಕ ಸ್ಥಳಗಳಿಗೆ ನಡೆದೇ ಹೋಗಬಹುದು; ಮೆಟ್ರೊ, ಬಸ್, ಟ್ಯಾಕ್ಸಿ ಸೌಕರ್ಯವೂ ಇದೆ.

## ಗ್ರಾಂಡ್ ಸೆಂಟ್ರಲ್ ಸ್ಟೇಶನ್

48 ಎಕರೆ ಪ್ರದೇಶದಲ್ಲಿ, 44 ಪ್ಲಾಟ್‌ಫಾರ್ಮ್‌ಗಳ, 100 ಟ್ರಾಕ್‌ಗಳಿರುವ, ದೇಶದ ಅತ್ಯಂತ ಬೃಹತ್ ಹಾಗೂ ಸುಂದರವಾದ ರೈಲ್ವೆ ನಿಲ್ದಾಣ ನಿರ್ಮಾಣವಾದದ್ದು 1871ರಲ್ಲಿ. ಭವ್ಯವಾಗಿಯೂ, ನಿರ್ಮಿಸಿರುವ ಈ ಮಾದರಿ ರೈಲ್ವೆ ನಿಲ್ದಾಣಕ್ಕೆ ನ್ಯೂಯಾರ್ಕ್ ಮೆಟ್ರೊ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ರೈಲ್ವೆ ಸಂಪರ್ಕವಿದೆ.



ಆ್ಯಪಲ್ ಸ್ಟೋರ್

## ಬ್ರ್ಯಾಂಟ್ ಪಾರ್ಕ್

ಟೈಮ್ಸ್ ಸ್ಕೇರಿನ ಹತ್ತಿರದಲ್ಲಿರುವ ಬ್ರ್ಯಾಂಟ್ ಪಾರ್ಕ್ ಅತ್ಯಂತ ಹೆಚ್ಚಿನ ಜನಸಾಂದ್ರತೆಯಿರುವ ಜನಪ್ರಿಯ ಪಾರ್ಕ್. ಮಧ್ಯಾಹ್ನವಂತೂ ಸಾರ್ವಜನಿಕ ಫುಡ್ ಕೋರ್ಟ್‌ನಂತೆಯೇ! ಇಲ್ಲಿ ಅನೇಕ ಮನರಂಜನೆ ಮತ್ತು ಸಾರ್ವಜನಿಕ ಕಾರ್ಯಕ್ರಮಗಳೂ ನಡೆಯುತ್ತವೆ. ಬ್ರ್ಯಾಂಟ್ ಪಾರ್ಕ್ ಸಾರ್ವಜನಿಕ ಸ್ವತ್ತಾದರೂ, ಆಡಳಿತವನ್ನು ಖಾಸಗಿ ಸಂಸ್ಥೆಗೆ ವಹಿಸಲಾಗಿದ್ದು, ಇದೊಂದು ಮಾದರಿ ವ್ಯವಸ್ಥೆ ಎನ್ನಲಾಗುತ್ತದೆ. ಪಾರ್ಕಿನ ಪಕ್ಕದಲ್ಲೇ ಇರುವ ಸಾರ್ವಜನಿಕ ಗ್ರಂಥಾಲಯದಲ್ಲಿನ ಸಂಗ್ರಹಣೆ 53 ದಶಲಕ್ಷ! ಜಗತ್ತಿನ ಮೂರನೇ ಅತ್ಯಂತ ಹಿರಿದಾದ ಗ್ರಂಥಾಲಯವೆನ್ನುವ ಹೆಗ್ಗಳಿಕೆ ಇದರದಾಗಿದೆ.

## ಸೆಂಟ್ರಲ್ ಪಾರ್ಕ್

ಬೆಂಗಳೂರಿನ ಲಾಲ್‌ಬಾಗ್ 240 ಎಕರೆಯಷ್ಟಾದರೆ, ಕಬ್ಬನ್ ಪಾರ್ಕ್ 300 ಎಕರೆಯಷ್ಟು; ಆದರೆ, 1857ರಲ್ಲಿ ನಿರ್ಮಿತವಾದ ಸೆಂಟ್ರಲ್ ಪಾಕ್ 843 ಎಕರೆಯಷ್ಟು ವಿಸ್ತಾರವಿದ್ದು, ಅಮೆರಿಕದ ಪ್ರಪ್ರಥಮ ಸಾರ್ವಜನಿಕ ಪಾರ್ಕ್. ಜಗತ್ತಿನ ಎರಡನೇ ಅತ್ಯಂತ ಜನಪ್ರಿಯ ಸ್ಥಳವೆನ್ನುವ ಹೆಗ್ಗಳಿಕೆಯ ಸೆಂಟ್ರಲ್ ಪಾರ್ಕ್‌ನಲ್ಲಿ 300ಕ್ಕೂ ಹೆಚ್ಚಿನ ಚಲನಚಿತ್ರಗಳ ಚಿತ್ರೀಕರಣಗಳು ನಡೆದಿವೆ.

ವಿಭಿನ್ನವಾದ ಆಕರ್ಷಣೆಗಳಿರುವ ಪಾರ್ಕಿನ ಅಧಿಕೃತ ವೆಬ್‌ಸೈಟಿನಲ್ಲಿ ಪ್ರವಾಸಿಗರಿಗೆ ಚಟುವಟಿಕೆಗಳ ವಿವರ, ಮಾರ್ಗಗಳ ದೂರ ಮತ್ತು ನಕ್ಷೆಯ ಮಾಹಿತಿ ಇರುವುದರಿಂದ, ನಮ್ಮ ಚೈತನ್ಯ ಮತ್ತು ಸಮಯಕ್ಕೆ ಅನುಗುಣವಾಗಿ ಚಟುವಟಿಕೆಗಳನ್ನು ಆಯ್ಕೆ ಮಾಡಿಕೊಳ್ಳಬಹುದು. 25,000 ವೃಕ್ಷಗಳಿರುವ ಸೆಂಟ್ರಲ್ ಪಾರ್ಕ್ ಅಸಂಖ್ಯಾತ ಜೀವ ವೈವಿಧ್ಯಗಳಿಗೂ ಪಕ್ಷಿ ಪ್ರಭೇದಗಳಿಗೂ ಆಶ್ರಯ ತಾಣ. ಕೂರಲು 9000 ಮರದ ಬೆಂಚ್‌ಗಳಿವೆ. ಸೇತುವೆಗಳು; ಕಾರಂಜಿಗಳು, ಶಿಲ್ಪಕಲಾಕೃತಿಗಳು, ಸ್ಮಾರಕಗಳು, ಮನರಂಜನೆ, ಮೃಗಾಲಯ, ಚಿತ್ರೋತ್ಸವಗಳು, ಉಪಾಹಾರಗೃಹಗಳು ಇಲ್ಲಿನ ಪ್ರಮುಖ ಆಕರ್ಷಣೆಗಳು. ಸೆಂಟ್ರಲ್ ಪಾರ್ಕಿನ ಸಂಪೂರ್ಣ ವೀಕ್ಷಣೆ ಒಂದು ದಿನದಲ್ಲಿ ಅಸಾಧ್ಯ.

ಸೆಂಟ್ರಲ್ ಪಾರ್ಕ್ ಬಳಿಯಿರುವ ಆಪಲ್ ಸ್ಟೋರ್ ವರ್ಷವಿಡೀ, ದಿನದ 24 ಗಂಟೆಯೂ ತೆರೆದಿರುತ್ತದೆ. ಅದೇ ಈ ಸ್ಟೋರ್‌ನ ವಿಶೇಷ.

## ಗ್ರೌಂಡ್ ಝೀರೊ

2001ರ ಸೆಪ್ಟೆಂಬರ್ ತಿಂಗಳ 9ರಂದು, ನ್ಯೂಯಾರ್ಕ್‌ನಲ್ಲಿ ನಡೆದ ದುರಂತ ಸ್ಥಳದಲ್ಲಿ ರಾಷ್ಟ್ರೀಯ ಸ್ಮಾರಕ ನಿರ್ಮಾಣವಾಗಿದೆ. ಮ್ಯಾನ್‌ಹ್ಯಾಟನ್‌ನ ದಕ್ಷಿಣದ ತುದಿಯಲ್ಲಿರುವ ಗ್ರೌಂಡ್ ಝೀರೊ ಹತ್ತಿರದಿಂದ ಲಿಬರ್ಟಿ ರಾಷ್ಟ್ರೀಯ ಸ್ಮಾರಕಕ್ಕೆ ಮತ್ತು ಎಲಿಸ್ ದ್ವೀಪಕ್ಕೆ ಭೇಟಿ ನೀಡಬಹುದು.

## ಎಂಪೈರ್ ಸ್ಟೇಟ್ ಬಿಲ್ಡಿಂಗ್

ಸುಮಾರು 40 ವರ್ಷಗಳ ಕಾಲ, 1970ರವರೆಗೆ ಅತ್ಯಂತ ಎತ್ತರದ ಗಗನಚುಂಬಿಯೆಂಬ ಹಿರಿಮೆಯ 103 ಮಹಡಿಗಳ ಎಂಪೈರ್ ಸ್ಟೇಟ್ ಬಿಲ್ಡಿಂಗ್, ವಾಸ್ತುಶಿಲ್ಪದ ಅದ್ಭುತ ಮಾದರಿ. ಟೈಮ್ಸ್ ಸ್ಕೇರಿನಿಂದ ಕೇವಲ ಐದು ನಿಮಿಷಗಳ ಕಾಲು ದಾರಿ. ಎಂಪೈರ್ ಸ್ಟೇಟ್‌ನ ಮಹಡಿಯಿಂದ ಇಡೀ ಮ್ಯಾನ್‌ಹ್ಯಾಟನ್‌ನ ಅಮೋಘವಾದ, ದೃಶ್ಯಾವಳಿ ಅವರ್ಣನೀಯ.

ಟೈಮ್ಸ್ ಸ್ಕೇರ್ ನ್ಯೂಯಾರ್ಕ್‌ನ ಶಾಪಿಂಗ್ ಮತ್ತು ಮನರಂಜನೆಯ ಕೇಂದ್ರಬಿಂದು. ಬೀದಿ ನಾಟಕಗಳು, ಬಣ್ಣಬಣ್ಣದ ಪೋಷಾಕುಗಳನ್ನು ಧರಿಸಿ ನಡೆಸುವ ಪ್ರದರ್ಶನಗಳಿಂದ ಮನರಂಜನೆ ಅಪರಿಮಿತ.

ಅಮೆರಿಕ ಈಗ ಕಲ್ಪನೆಯ ಮಾಯಾಲೋಕವಲ್ಲ; ಜಗತ್ತಿನ ನಾಗರಿಕತೆಯ ಅಳಿವು–ಉಳಿವಿನ ಅನೇಕ ಪ್ರಶ್ನೆಗಳನ್ನು ಮೂಡಿಸುತ್ತದೆ. ಆದರೂ, ಸುಮಾರು ಮೂರು ದಶಲಕ್ಷ ಭಾರತೀಯರಿರುವ ಶ್ರೀಮಂತ ದೇಶವಿದು. ನಮ್ಮವರು, ಇಲ್ಲಿನ ಆಡಳಿತ ವ್ಯವಸ್ಥೆಯಲ್ಲಿಯೂ, ವಾಣಿಜ್ಯೋದ್ಯಮದಲ್ಲೂ ಪ್ರಭಾವೀ ಸಮುದಾಯ.